**ಕರ್ನಾಟಕ ಸರ್ಕಾರ**
**(ಮೀನುಗಾರಿಕೆ ಇಲಾಖೆ)**
**ಮೀನುಗಾರಿಕೆ ನಿರ್ದೇಶನಾಲಯ 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ//ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560001.**

**ಸಂಖ್ಯೆ:DOF –FISHHO/FCS/42/2023 ಇ- 1152742** **ದಿನಾಂಕ:08-08-2023**

**ಸುತ್ತೋಲೆ**

ಕರ್ನಾಟಕ ರಾಜ್ಯದಲ್ಲಿ ಕಾರ್ಯಸ್ಥಗಿತ/ಸಮಾಪನೆಗೊಂಡ ಮೀನುಗಾರಿಕೆ ಸಹಕಾರ ಸಂಘಗಳನ್ನು ಪುನಶ್ಚೇತನಗೊಳಿಸುವಾಗ ಮೀನುಗಾರಿಕೆ ಇಲಾಖೆಯ ಗಮನಕ್ಕೆ ಬಾರದೇ ಸಂಘಗಳ ಕಾರ್ಯವ್ಯಾಪ್ತಿಯು ಅತಿಕ್ರಮಣವಾಗಿ ಗೊಂದಲಗಳು ಸೃಷ್ಟಿಯಾಗುತ್ತಿರುವುದನ್ನು ಮನಗಂಡು ಕಾರ್ಯಸ್ಥಗಿತ/ ಸಮಾಪನೆಗೊಂಡ ಮೀನುಗಾರಿಕೆ ಸಹಕಾರ ಸಂಘಗಳನ್ನು ಪುನಶ್ಚೇತನಗೊಳಿಸುವಾಗ ಮೀನುಗಾರಿಕೆ ಇಲಾಖೆಯ ಸಾಧ್ಯತಾ ವರದಿಯನ್ನು ಪಡೆಯುವುದು ಕಡ್ಡಾಯವೆಂದು ಭಾವಿಸಿ ಕಾರ್ಯಸ್ಥಗಿತ/ಸಮಾಪನೆಗೊಂಡ ಮೀನುಗಾರಿಕೆ ಸಹಕಾರ ಸಂಘಗಳನ್ನು ಪುನಶ್ಚೇತನಗೊಳಿಸುವಾಗ ಮೀನುಗಾರಿಕೆ ಇಲಾಖೆಯು ಸಾಧ್ಯತಾ ವರದಿಯನ್ನು ನೀಡುವಾಗ ಅಗತ್ಯವಾಗಿ ಪಾಲಿಸಬೇಕಾದ ಮಾರ್ಗಸೂಚಿಗಳು.

1. ಪುನಶ್ಚೇತನಗೊಳಿಸಬಹುದಾದ ಮೀನುಗಾರರ ಸಹಕಾರ ಸಂಘದ ಕಾರ್ಯವ್ಯಾಪ್ತಿಯು ಹಾಲಿ ಅಸ್ತಿತ್ವದಲ್ಲಿರುವ ಮತ್ತೊಂದು ಸಹಕಾರ ಸಂಘದ ಕಾರ್ಯವ್ಯಾಪ್ತಿಯನ್ನು ಅಕ್ರಮಿಸಬಾರದು.
2. ಪುನಶ್ಚೇತನಗೊಳಿಸಬಹುದಾದ ಮೀನುಗಾರರ ಸಹಕಾರ ಸಂಘದ ಕಾರ್ಯವ್ಯಾಪ್ತಿಯಲ್ಲಿ ಕನಿಷ್ಟ ಒಂದು ಜಲಸಂಪನ್ಮೂಲ ಇರಬೇಕು.
3. ಪುನಶ್ಚೇತನಗೊಳಿಸಬಹುದಾದ ಮೀನುಗಾರರ ಸಹಕಾರ ಸಂಘದ ಕಾರ್ಯವ್ಯಾಪ್ತಿಯಲ್ಲಿ ಕನಿಷ್ಟ 20 ವೃತ್ತಿಪರ ಮೀನುಗಾರರು ಇರಬೇಕು.
4. ಪುನಶ್ಚೇತನಗೊಳಿಸಬಹುದಾದ ಮೀನುಗಾರರ ಸಹಕಾರ ಸಂಘದ ಸದಸ್ಯರು ಕಡ್ಡಾಯವಾಗಿ ಸಂಘದ ಘೋಷಿತ ಕಾರ್ಯವ್ಯಾಪ್ತಿಯ ಸಾಮಾನ್ಯ ನಿವಾಸಿಯಾಗಿರಬೇಕು. ಅವರು ಸಾಮಾನ್ಯ ನಿವಾಸಿಗಳೆಂದು ಪಡಿತರ ಚೀಟಿ, ಆಧಾರ್ ಕಾರ್ಡ್, ಚುನಾವಣಾ ಗುರುತಿನ ಚೀಟಿ, ವಾಸ ಸ್ಥಳ ದೃಢೀಕರಣ ಪತ್ರ, ಜಾತಿ ಪ್ರಮಾಣ ಪತ್ರ ಅಥವಾ ಇನ್ನಿತರ ಸರ್ಕಾರದ ದಾಖಲೆಗಳ ಮುಖಾಂತರ ಖಾತರಿ ಪಡಿಸಿಕೊಳ್ಳಬೇಕು.
5. ಪುನಶ್ಚೇತನಗೊಳಿಸಬಹುದಾದ ಮೀನುಗಾರರ ಸಹಕಾರ ಸಂಘದ ಸದಸ್ಯರು ಮೀನುಗಾರರೆಂಬುದನ್ನು ಮೀನುಗಾರರ "ಕೌಶಲ್ಯ ಪರೀಕ್ಷೆ" ಮುಖಾಂತರ ದೃಢೀಕರಿಸಿಕೊಳ್ಳಬೇಕು.
6. **"ಮೀನುಗಾರರ ಕೌಶಲ್ಯ ಪರೀಕ್ಷೆ"**
   ಮೀನುಗಾರರ ಸಹಕಾರ ಸಂಘದ ಸದಸ್ಯರಾದವರು ಈ ಕೆಳಗಿನಂತೆ ಅರ್ಹತೆಗಳಿರಬೇಕು.

ಅ) ಮೀನುಗಾರರ ಸಹಕಾರ ಸಂಘದ ಸದಸ್ಯರಿಗೆ ಈಜಲು ಬರಬೇಕು (ಮಹಿಳೆಯರಿಗೆ ಅನ್ವಯಿಸುವುದಿಲ್ಲ. ಪ್ರತಿ ಸದಸ್ಯರು 25 ಮೀಟರ್ ನಷ್ಟು ಈಜಲು ಸಾಮರ್ಥ್ಯ ಹೊಂದಿರಬೇಕು.

ಆ) ಬೀಸು ಬಲೆಯನ್ನು ಬಳಸಿ ಮೀನು ಹಿಡಿಯಲು ಶಕ್ತನಾಗಿರಬೇಕು. ಬಲೆ ಬೀಸಿದಾಗ, ಬೀಸು ಬಲೆ ಕನಿಷ್ಠ ಶೇಕಡ 60 ರಷ್ಟು ವೃತ್ತಾಕಾರದಲ್ಲಿರಬೇಕು.

ಇ) ಎಳೆ ಬಲೆಯನ್ನು ಬಳಸಿ ಮೀನು ಹಿಡಿಯುವಾಗ ತಳಭಾಗದ "ಕಾಲಿನ ಹಗ್ಗದಡಿ" ಮೀನುಗಳು ನುಸುಳುದಂತೆ ಬಲೆಯನ್ನು ಬಳಸಬಲ್ಲವರಾಗಿರಬೇಕು.

ಈ) ಬಿಡು ಬಲೆಯನ್ನು ತೆಪ್ಪ ಅಥವಾ ಹರಿಗೋಲು ಬಳಸಿ ಆಳವಾದ ನೀರಿನಲ್ಲಿ ಬಲೆ ನೇರವಾಗಿ ನಿಲ್ಲುವಂತೆ ಬಳಸುವ ಕೌಶಲ್ಯವಿರಬೇಕು.

ಉ) ಮೀನು ಹಿಡಿಯುವ ಬಲೆಗಳನ್ನು ರಿಪೇರಿ ಮಾಡಲು ತಿಳಿದಿರಬೇಕು. ಪುರುಷ ಸದಸ್ಯರುಗಳು ಮೇಲಿನ ಅರ್ಹತೆಯಲ್ಲಿ ಕನಿಷ್ಟ 5 ಅರ್ಹತೆಗಳನ್ನು ಹೊಂದಿರಬೇಕು ಆದರೆ, ಈಜಲು ಬರುವುದು ಕಡ್ಡಾಯವಾಗಿರುತ್ತದೆ. ಮಹಿಳಾ ಸದಸ್ಯರು ಕನಿಷ್ಟ 3 ಅರ್ಹತೆಗಳನ್ನು ಹೊಂದಿರಬೇಕು.

7. ಕೌಶಲ್ಯ ಪರೀಕ್ಷೆಯನ್ನು ಈ ಕೆಳಕಂಡ ಸದಸ್ಯರುಗಳನ್ನೊಳಗೊಂಡ ಸಮಿತಿಯು ನಡೆಸುವುದು.

ಅ) ಸಂಬಂಧಪಟ್ಟ ವಲಯದ ಮೀನುಗಾರಿಕೆ ಜಂಟಿ ನಿರ್ದೇಶಕರು -ಅಧ್ಯಕ್ಷರು

ಆ) ಸಂಬಂಧಪಟ್ಟ ಜಿಲ್ಲಾಮಟ್ಟದ ಮೀನುಗಾರಿಕೆ ಉಪನಿರ್ದೇಶಕರು -ಸದಸ್ಯರು

ಇ) ಸಂಬಂಧಪಟ್ಟ ತಾಲ್ಲೂಕು ಮಟ್ಟದ ಮೀನುಗಾರಿಕೆ ಸಹಾಯಕ ನಿರ್ದೇಶಕರು -ಸಂಚಾಲಕರು

ಈ) ಮೀನು ಉತ್ಪಾದಕ ಸಂಸ್ಥೆಯ ಅಧ್ಯಕ್ಷರು ಮತ್ತು ಕಾರ್ಯನಿರ್ವಹಣಾ ಅಧಿಕಾರಿ -ಸದಸ್ಯರುಗಳು

ಉ) ಸಂಬಂಧಪಟ್ಟ ಗ್ರಾಮಪಂಚಾಯಿತಿ ಅಧ್ಯಕ್ಷರು/ಕಾರ್ಯದರ್ಶಿ - ಸದಸ್ಯರು

ಕೌಶಲ್ಯ ಪರೀಕ್ಷೆಯ ಸಮಿತಿಯ ಸಂಚಾಲಕರು ಕೌಶಲ್ಯ ಪರೀಕ್ಷೆ ನಡೆಯುವ ಸ್ಥಳ, ವೇಳೆ, ದಿನಾಂಕವನ್ನು ಒಂದು ವಾರದ ಮುಂಚೆ ತಿಳಿಸತಕ್ಕದ್ದು. ಇದನ್ನು ಟಪಾಲಿನಲ್ಲಿ ನೇರವಾಗಿ ಅಥವಾ ಗ್ರಾಮದಲ್ಲಿ ಟಾಮ್ ಟಾಮ್ ಮೂಲಕ ಪ್ರಚಾರ ಮಾಡಿಸುವುದು ಮತ್ತು ಗ್ರಾಮಪಂಚಾಯಿತಿಯ ನೋಟೀಸ್ ಬೋರ್ಡಿನಲ್ಲಿ ಪ್ರಚಾರ ಪಡಿಸುವುದು.

8. ಕೌಶಲ್ಯ ಅರ್ಹತೆ ಪರೀಕ್ಷೆಯನ್ನು ವಿಡಿಯೋ ಮೂಲಕ ಚಿತ್ರಿಸಿ ಅದರ ಒಂದು ಸಾಫ್ಟ್ ಕಾಪಿಯನ್ನು ಅರ್ಹತೆ ಪರೀಕ್ಷೆಯ ಫಲಿತಾಂಶದೊಂದಿಗೆ ಮೀನುಗಾರರ ಸಹಕಾರ ಸಂಘದ ಪ್ರಸ್ತಾವನೆಯೊಡನೆ ಮೀನುಗಾರಿಕೆ ನಿರ್ದೇಶನಾಲಯಕ್ಕೆ ಸಲ್ಲಿಸತಕ್ಕದು.

**ಮೀನುಗಾರಿಕೆ ನಿರ್ದೇಶಕರು**

08/08/2023 08/08/2023

**ಇವರಿಗೆ,**

ಮಾನ್ಯ ಸಹಕಾರ ಸಂಘಗಳ ನಿಬಂಧಕರು, ನಂ.1 ಆಲಿ ಆಸ್ಕರ್ ರಸ್ತೆ, ಬೆಂಗಳೂರು-560052 ರವರಿಗೆ ಸಲ್ಲಿಸುತ್ತಾ ಸದರಿ ಸುತ್ತೋಲೆಯನ್ನು ತಮ್ಮ ಜಿಲ್ಲೆ ಮತ್ತು ಉಪ ವಿಭಾಗದ ಎಲ್ಲಾ ಅಧಿಕಾರಿಗಳಿಗೆ ಕಳುಹಿಸಿಕೊಡುವಂತೆ ಕೋರಿದೆ.

ಎಲ್ಲಾ ಮೀನುಗಾರಿಕೆ ಜಂಟಿ ನಿರ್ದೇಶಕರುಗಳಿಗೆ

ಎಲ್ಲಾ ಮೀನುಗಾರಿಕೆ ಉಪ ನಿರ್ದೇಶಕರುಗಳಿಗೆ

ಎಲ್ಲಾ ಮೀನುಗಾರಿಕೆ ಸಹಾಯಕ ನಿರ್ದೇಶಕರುಗಳಿಗೆ

**ಪ್ರತಿ:** 1) ಈ ಕಛೇರಿಯ ಹಗುಪ (1) ಮತ್ತು (2) ಸಂಕಲನಗಳಿಗೆ ಮಾಹಿತಿಗಾಗಿ

2) ಎಫ್. ಸಿ.ಎಸ್. ಸಂಗ್ರಹ ಕಡತಕ್ಕೆ